ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ
ಗೋಕುಲ ರಸ್ತೆ, ಹುಬ್ಬಳ್ಳಿ-580030.
ದೂರವಾಣಿ:0836-2333058
ವೆಬ್ ಸೈಟ್:www.nwkrtc.karnataka.gov.in

ಆಡಳಿತ/ಸಿಬ್ಬಂದಿ ಇಲಾಖೆ

NORTH WESTERN KARNATAKA ROAD TRANSPORT CORPORATION
Central Office,
Gokul Road, Hubballi-580030
Tel: 0836-2333058
Website : www.nwkrtc.karnataka.gov.in

ಸಂ.ವಾಕರಸಾ/ಕೇಕ/ಹು/ಸಿಬ್ಬಂದಿ/ಎ6/ 233 /2023-24 ದಿನಾಂಕ: 07-02-2024

## ಃ ಪ್ರಕಟಣೆ ಃ

ವಿಷಯ: ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಸಂಸ್ಥೆಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸುವ ಬಗ್ಗೆ.

*****

ಕೇಂದ್ರ ಕಛೇರಿ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದರ್ಜೆ-3 ಸಹಾಯಕ ವೃಂದದ (ಸಹಾಯಕ, ಸಹಾಯಕ ಲೆಕ್ಕಿಗ. ಅಂಕಿಸಂಖ್ಯೆ ಸಹಾಯಕ, ಸಹಾಯಕ ಉಗ್ರಾಣ ರಕ್ಷಕ, ಕಿರಿಯ ಶೀಘ್ರಲಿಪಿಗಾರ, ಸಹಾಯಕ ಭದ್ರತಾ ನಿರೀಕ್ಷಕ) ಹುದ್ದೆಗಳ ದಿನಾಂಕ 01-01-2023 ರಿಂದ 31-12-2023ರ ವರೆಗಿನ ಅವಧಿಯನ್ನು ಒಳಗೊಂಡಂತೆ ದಿನಾಂಕ 01-01-2024ರಂದು ಇರುವಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಲಾಗಿದ್ದು, ಅವುಗಳನ್ನು ಸಂಸ್ಥೆಯ ಅಧಿಕೃತ ಜಾಲತಾಣ nwkrtc.karnataka.gov.in ದಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ಕೇಂದ್ರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದರ್ಜೆ-3 ಸಹಾಯಕ ವೃಂದದ (ಸಹಾಯಕ, ಸಹಾಯಕ ಲೆಕ್ಕಿಗ. ಅಂಕಿಸಂಖ್ಯೆ ಸಹಾಯಕ, ಸಹಾಯಕ ಉಗ್ರಾಣ ರಕ್ಷಕ, ಕಿರಿಯ ಶೀಘ್ರಲಿಪಿಗಾರ, ಸಹಾಯಕ ಭದ್ರತಾ ನಿರೀಕ್ಷಕ) ಹುದ್ದೆಗಳ ವಿವರವನ್ನು ಸಂಸ್ಥೆಯ ಜಾಲತಾಣದಲ್ಲಿ ಪ್ರಕಟಿಸುವ, ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಸಕಾಲದಲ್ಲಿ ಗಮನಿಸುವಂತೆ ಹಾಗೂ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳಲ್ಲಿ ನಮೂದಿಸಿರುವ ಸೇವಾ ವಿವರ, ಜೇಷ್ಠತಾ ಸ್ಥಾನ/ಸ್ಥಿತಿ ಮತ್ತು ಜೇಷ್ಠತೆಗೆ ಸಂಬಂಧಿಸಿದ ಇತರೆ ಅಂಶಗಳ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ಆಕ್ಷೇಪಣೆಗಳನ್ನು ಸಮರ್ಥಿಸುವಂತೆ ದೃಢೀಕೃತ ದಾಖಲೆಗಳೊಂದಿಗೆ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ವಾಕರಸಾಸಂಸ್ಥೆ, ಕೇಂದ್ರ ಕಛೇರಿ, ಆಡಳಿತ/ಸಿಬ್ಬಂದಿ ಇಲಾಖೆ. ಹುಬ್ಬಳ್ಳಿ ಇಲ್ಲಿಗೆ ತಲುಪುವಂತೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ ಹಾಗೂ ನಿಗದಿತ ಅವಧಿಯ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮಗೊಳಿಸಿದ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಸಹ ಸಂಸ್ಥೆಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗುವುದು.

ಮುಂದುವರೆದು, ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಸಂಸ್ಥೆಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸುತ್ತಿರುವುದರಿಂದ, ವೈಯಕ್ತಿಕವಾಗಿ ಉದ್ಯೋಗಿಗಳಿಗೆ ಜಾರಿಗೊಳಿಸಲಾಗುವುದಿಲ್ಲವೆಂದು ಈ ಮೂಲ ಸ್ಪಷ್ಟಪಡಿಸಲಾಗಿದೆ.

ಸದರಿ ಪ್ರಕಟಣೆಯನ್ನು ಎಲ್ಲಾ ದರ್ಜೆ-3 ಸಹಾಯಕ ವೃಂದದವರು ಗಮನಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು.